**ದಿನಾಂಕಃ 18.03.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲು : ವಾದಿಯ ಪರ ವಕೀಲರಿಂದಃ**

4. ನಾನು ದಿನಾಂಕ 07.11.2018 ರಂದು ರಿಪ್ಲೆ ನೋಟೀಸ್ ಕೊಟ್ಟಿದ್ದೆ ಎಂದರೆ ಸರಿ. ಸದರಿ ರಿಪ್ಲೆ ನೋಟೀಸ್ ನಲ್ಲಿ ನಾನು ವ್ಯವಹಾರ ಮತ್ತು ದುಡ್ಡು ಕೊಡುವ ಬಗ್ಗೆ ಒಪ್ಪಿಕೊಂಡಿದ್ದೇನೆ ಎಂದರೆ ಸರಿ. ರಿಪ್ಲೆ ನೋಟೀಸ್ ನೀಡಿದ ದಿನಾಂಕದಿಂದ ಇಲ್ಲಿಯವರೆಗೆ ನಾನು ಯಾವುದೇ ಹಣ ನೀಡಿಲ್ಲ ಎಂದರೆ ಕೊಟ್ಟಿದ್ದೇನೆ. 2018 ರಲ್ಲಿ ಒಂದು ಬಾರಿ ರೂ. 8 ಲಕ್ಷ ಕೊಟ್ಟಿದ್ದೆ. ಅದಾದ 15 ದಿನಗಳ ಒಳಗಡೆ ರೂ. 4 ಲಕ್ಷ 40 ಸಾವಿರ ಕೊಟ್ಟಿದ್ದೆ. ಅಲ್ಲಿಂದ 8 ದಿನಗಳ ನಂತರ ರೂ. 8 ಲಕ್ಷ ಕೊಟ್ಟಿದ್ದೆ. ಅಲ್ಲಿಂದ 10 ದಿನಗಳ ನಂತರ ರೂ. 10 ಲಕ್ಷ ಕೊಟ್ಟಿದ್ದೆ. ಈ ಎಲ್ಲಾ ಹಣದ ಮೊತ್ತಗಳನ್ನು ನಾನು ನಗದು ರೂಪದಲ್ಲೇ ಕೊಟ್ಟಿದ್ದೇನೆ. ನಾನು ಹೇಳುತ್ತೇನೆ, ಚನ್ನಯ್ಯ ಕೂಡಾ ನನಗೆ ನಗದಾಗಿ ಹಣ ಕೊಟ್ಟಿದ್ದರಿಂದ ನಾನೂ ಕೂಡಾ ನಗದಾಗಿಯೇ ವಾಪಸ್ಸು ಕೊಟ್ಟಿದ್ದೇನೆ. ನಾನು ಈಗ ಹಗರಿಬೊಮ್ಮನಹಳ್ಳಿಯಲ್ಲಿ ವಾಟರ್ ಸರ್ವೀಸ್ ಸ್ಟೇಶನ್ ನಡೆಸುತ್ತಿದ್ದೇನೆ. ಅದರಿಂದ ದಿನಕ್ಕೆ ಎಲ್ಲಾ ಖರ್ಚು ಕಳೆದು ನನಗೆ ರೂ. 6 ರಿಂದ 7 ಸಾವಿರ ಆದಾಯ ಬರುತ್ತದೆ. ನಾನು ಒಂದೂವರೆ ವರ್ಷಗಳಿಂದ ವಾಟರ್ ಸರ್ವೀಸ್ ಸ್ಟೇಶನ್ ನಡೆಸುತ್ತಿದ್ದೇನೆ. ನಾನು ಹೇಳಿದ ಹಣದ ಮೊತ್ತಗಳನ್ನು ವಾಪಸ್ಸು ಕೊಡುವಾಗ ಅವರಿಂದ ನಾನು ಯಾವುದೇ ಬರವಣಿಗೆ ಮಾಡಿಸಿಕೊಳ್ಳಲಿಲ್ಲ. ನಾನು ಯಾವುದೇ ಹಣ ವಾಪಸ್ಸು ಮಾಡದೇ ಇದ್ದರೂ ವಾದಿಗಳ ಹಣವನ್ನು ಎತ್ತಿಹಾಕಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ಕೂಡ್ಲಿಗಿಯ ಬಷೀರ್ ಅಹ್ಮದ್ ವಕೀಲರು ನನಗೆ ಪರಿಚಯವಿದ್ದಾರೆ ಎಂದರೆ ಸರಿಯಲ್ಲ. ಬದರುನ್ನೀಸಾ ಬೇಗಂ ನನಗೆ ಪರಿಚಯವಿಲ್ಲ. ಬಷೀರ್ ಅಹ್ಮದ್ ರವರು ನನ್ನ ಮತ್ತು ಬದರುನ್ನೀಸಾ ಬೇಗಂ ವಿರುದ್ಧ ಕೂಡ್ಲಿಗಿಯಲ್ಲಿ ಓ.ಎಸ್. ನಂ. 286/2020 ದಾವೆ ಹಾಕಿದ್ದರು ಎಂದರೆ ಹಾಕಿದ್ದರು, ಅದು ವಜಾ ಆಯಿತು. ಆ ದಾವೆಯನ್ನು ಯಾವ ಉದ್ದೇಶಕ್ಕೆ ಹಾಕಿದ್ದರು? ಎಂದರೆ ನನಗೆ ಗೊತ್ತಿಲ್ಲ, ನನ್ನ ವಕೀಲರಿಗೆ ಗೊತ್ತಿದೆ. ಕೂಡ್ಲಿಗಿ ನ್ಯಾಯಾಲಯದಲ್ಲಿ ಇದೇ ವಕೀಲರೇ ನನ್ನನ್ನು ಪ್ರತಿನಿಧಿಸಿದ್ದರು ಎಂದರೆ ಸರಿ. ಆ ದಾವೆಯನ್ನು ಬಷೀರ್ ಅಹ್ಮದ್ ಯಾಕೆ ಸಲ್ಲಿಸಿದ್ದರೆಂದು ನಿಮ್ಮ ವಕೀಲರು ಹೇಳಿದ್ದರೇ? ಎಂದರೆ ಹೇಳಿದ್ದರು. ಲೇಔಟ್ ಮಾಡಿದ ಸೈಟುಗಳಲ್ಲಿ ಅವರಿಗೂ ಭಾಗ ಬರಬೇಕೆಂದು ದಾವೆ ಹಾಕಿದ್ದಾರೆ ಎಂದು ಹೇಳಿದ್ದರು. ನಾನು ಬಷೀರ್ ಅಹ್ಮದ್ ರವರಿಗೆ ದಿನಾಂಕ 02.03.2019 ರಂದು ಅವರ ಜೊತೆ ಪಾಲುದಾರನಾಗಿ ಜಂಟಿಯಾಗಿ ಲೇಔಟ್ ಮಾಡುವ ಬಗ್ಗೆ ನೋಂದಾಯಿತ ಕರಾರು ಮಾಡಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಸದರಿ ಕರಾರನ್ನು ತೋರಿಸಿ ಇದರಲ್ಲಿ ನಿಮ್ಮ ಸಹಿ ಇದೆ ಎಂದರೆ ಇಲ್ಲವೆಂದು ನಿರಾಕರಿಸಿದ್ದಾರೆ. ಸಾಕ್ಷಿಗೆ ಕೂಡ್ಲಿಗಿ ನ್ಯಾಯಾಲಯದ ದಾವೆಯಲ್ಲಿ ನೀವು ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿ ನಿಮ್ಮ ಸಹಿಗಳಿವೆ ಎಂದು ದೃಢೀಕೃತ ಪ್ರತಿಯನ್ನು ತೋರಿಸಿದರೆ ನನ್ನ ಸಹಿ ಅಲ್ಲವೆಂದು ನಿರಾಕರಿಸಿದ್ದಾರೆ. 2016 ಮತ್ತು 2018 ರಲ್ಲಿ ನಾನು ಚನ್ನಯ್ಯ ಹಾಗೂ ವಾದಿಗಳಿಗೆ ಜೆ.ಡಿ.ಎ ಕರಾರು ಮಾಡಿಕೊಟ್ಟು ನಂತರ ಬಷೀರ್ ಅಹ್ಮದ್ ರವರ ಜೊತೆ ಬೇರೊಂದು ಕರಾರು ಮಾಡಿಕೊಂಡು ವಾದಿಗಳಿಗೆ ಅಭಿವೃದ್ಧಿ ಮಾಡಲು ಜಮೀನನ್ನು ಕೊಡಲಿಲ್ಲ ಎಂದರೆ ನಾನು 2016 ರಲ್ಲಿ ಚನ್ನಯ್ಯನಿಗೆ ಮಾತ್ರ ಕರಾರು ಮಾಡಿಕೊಟ್ಟಿದ್ದೆ, 2018 ರಲ್ಲಿ ಕರಾರು ಮಾಡಿಕೊಟ್ಟಿಲ್ಲ. ನಾನು ಹೇಳುತ್ತೇನೆ, 2016 ರಲ್ಲೇ ನನ್ನ ಜಮೀನನ್ನು ಚನ್ನಯ್ಯನವರ ಸ್ವಾಧೀನಕ್ಕೆ ಕೊಟ್ಟಿದ್ದೆ. ಜಮೀನನ್ನು ವಾದಿಗಳಿಗೆ ಅಭಿವೃದ್ಧಿ ಮಾಡಲು ನಾನು ಅವಕಾಶವನ್ನೇ ಕೊಟ್ಟಿರಲಿಲ್ಲ ಎಂದರೆ

ಸರಿಯಲ್ಲ. ಅದೇ ಕಾರಣಕ್ಕೆ ಅವರು ನನಗೆ ನೋಟೀಸ್ ಕಳುಹಿಸಿದ್ದರು ಎಂದರೆ ಸರಿಯಲ್ಲ. ನಾನು ಹೇಳುತ್ತೇನೆ, ಚನ್ನಯ್ಯನವರು ಎನ್.ಎ ಅಪ್ರೂವಲ್ ಮಾಡಿಸಲೇ ಇಲ್ಲ ಅದಕ್ಕಾಗಿಯೇ ಅವರು ಅವರ ಕೈಲಿ ಆಗುವುದಿಲ್ಲವೆಂದು ಹಣ ವಾಪಸ್ಸು ಕೊಡುವಂತೆ ನೋಟೀಸ್ ಕಳುಹಿಸಿದ್ದರು. ವಾದಿಗಳು ನೀಡಿದ ನೋಟೀಸಿಗೆ ನಾನು ರಿಪ್ಲೆ ನೋಟೀಸ್ ನೀಡಿ ವಾದಿಗಳು ನಿವೇಶನ ಖರೀದಿದಾರರಿಂದ ಸಂಗ್ರಹಿಸಿದ ಇ.ಎಮ್.ಐ ಮೊತ್ತಗಳನ್ನು ಪೂರ್ಣವಾಗಿ ವಾಪಸ್ಸು ಮಾಡಿದ ನಂತರ ಬಡ್ಡಿ ಸಮೇತವಾಗಿ ಮುಂಗಡ ಪಡೆದ ಹಣವನ್ನು ವಾದಿಗಳಿಗೆ ವಾಪಸ್ಸು ಮಾಡುತ್ತೇನೆ ಎಂದು ತಿಳಿಸಿದ್ದೆ ಎಂದರೆ ಸರಿ. ಆ ಪ್ರಕಾರ ವಾದಿಗಳು ನಿವೇಶನ ಖರೀದಿದಾರರಿಗೆ ಅವರ ಇ.ಎಮ್.ಐ ಮೊತ್ತಗಳನ್ನು ವಾಪಸ್ಸು ಕೊಟ್ಟ ನಂತರ ನಾನು ವಾದಿಗಳಿಗೆ ಬಡ್ಡಿ ಸಮೇತ ಅವರ ಮುಂಗಡವನ್ನು ವಾಪಸ್ಸು ಮಾಡಲು ನಿರಾಕರಿಸಿದ್ದೆ ಎಂದರೆ ಸರಿಯಲ್ಲ. ವಾದಿಗಳ ಹಣವನ್ನು ಎತ್ತಿ ಹಾಕುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳಿಗೆ ಮುಂಗಡ ಮತ್ತು ಬಡ್ಡಿ ಮೊತ್ತವನ್ನು ಪಾವತಿ ಮಾಡಲು ನಾನು ಬಾಧ್ಯಸ್ಥನು ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ. ಹಗರಿಬೊಮ್ಮನಹಳ್ಳಿ